ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಜೂನ್ ತಿಂಗಳಲ್ಲಿ ಸಕ್ಕರೆಯನ್ನು ಕೊಟ್ಟಿಲ್ಲ, ಅದನ್ನು ಈ ತಿಂಗಳಲ್ಲಿಕೊಡುತ್ತೀರಾ ?

ಅಧ್ಯಕ್ಷರು.—ಈ ರೀತಿ ಪ್ರಶ್ನೆ ಕೇಳುವುದಕ್ಕೆ ಸಾಧ್ಯವಿಲ್ಲ. ನಿಯಮದ ಪ್ರಕಾರ ಅವಕಾಶ ಕೊಡಲಿಕ್ಕೆ ಬರುವುದಿಲ್ಲ.

(ಶ್ರೀ ಯಡಿಯೂರಪ್ಪನವರು ಸಭೆಯ ಒಳಾಂಗಣವನ್ನು ಪ್ರವೇಶಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನದಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಅಂದರೆ ಹೇಗೆ ? ನಾನು ಬೆಳಿಗ್ಗೆಯಿಂದ ಒಂದು ನಿಮಿಷ ಕೂಡ ಮೇಲೆ ಎದ್ದಿಲ್ಲ, ನನ್ನ ಜಿಲ್ಲೆಯ ಬಗೆ ಕಳಕಳಿ ಇಲ್ಲವೇ. ? ನಾನು ಬೆಳಿಗ್ಗೆಯಿಂದ ಒಂದು ಶಬ್ದ ಕೂಡ ಹೇಳಲು ಮೇಲೆ ಎದ್ದಿಲ್ಲ. ಈಗ ಒಂದು ಕ್ಲಾರಿಫಿಕೇಷನ್ ಕೇಳಲು ಮೇಲೆ ಎದ್ದರೆ ಅವಕಾಶ ಕೊಡುವುದಿಲ್ಲ ಅಂದರೆ ಏನು ಅರ್ಥ ? ಮಾತ ನಾಡುವುದಕ್ಕೆ ಅವಕಾಶವಿಲ್ಲವಾದರೆ ನಾವು ಇಲ್ಲಿ ಏಕೆ ಇರಬೇಕು ? ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳಿ.

ಅಧ್ಯಕ್ಷರು.—ನಿಯಮದ ಪ್ರಕಾರ ಅವಕಾಶ ಕೊಡಲಿಕ್ಕೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗಾದರೆ ನಾವು ಶಾಸಕರಾಗಿ ಏಕೆ ಇರಬೇಕು ? ನಿಯಮ ರೂಲ್ಸ್ ಅಂದರೆ ಬೆಳಿಗ್ಗೆಯಿಂದ ಸದನದಲ್ಲಿ ರೂಲ್ಸ್ ಪ್ರಕಾರವೇ ನಡೆಯುತ್ತಿದೆಯೇ. ?

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆಯಿಂದ ಬರಗಾಲದ ಬಗ್ಗೆ ಮಾತನಾಡಿಯಾಯಿತು. ಬೆಳಿಗ್ಗೆಯಿಂದ ಇಷ್ಟರತನಕ ವಿನಾಕಾರಣ ಒಣ ಚರ್ಚೆ ನಡೆದಿದೆ. ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಇದು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಯಾರು ಕಾಲಿಂಗ್ ಅಟೆನ್‌ಷನ್ ಹಾಕಿದ್ದಾರೋ ಅವರಿಗೆ ಮಾತ್ರ ಅವಕಾಶ ಕೊಡಬೇಕು ಎಂದು ಇದೆ. ಆ ಪ್ರಕಾರ ನಡೆಯುತ್ತಿದೆಯೇ, ಅಂದರೆ ಇಲ್ಲ.

ಅಧ್ಯಕ್ಷರು.—ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಪ್ರಕಾರ ನಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್‌ಗೆ ವಿರುದ್ಧವಾಗಿ ಮಾತನಾಡಿದಂಥ ಜನ ಇಲ್ಲವೇ ಇಲ್ಲ ? ಹಾಗಾದರೆ ಸಿಕ್ಕಾಪಟ್ಟೆ ಏನು ಬೇಕಾದರೂ ಮಾತನಾಡಬಹುದು ಎಂದು ಅರ್ಥವೇ ?

ಶ್ರೀ ಆರ್. ವೆಂಕಟರಾಮಯ್ಯ.—ಇಷ್ಟೆಲ್ಲಾ ವೇಸ್ಟ್ ಆಗುತ್ತಿದೆ ಒಂದು ಸ್ಮಾಲ್ ಪಾಯಿಂಟ್‌ಗೆ ಅವಕಾಶ ಕೊಡದೇಹೋದರೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು ?

(ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನವನ್ನು ಅಲಂಕರಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ವರ್ತನೆಯಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ ದಯಮಾಡಿ ಕ್ಷಮಿಸಬೇಕು. ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕು ಎನ್ನುವ ಉದ್ದೇಶ ಸನ ಗಿಲ್ಲ. ಈರೀತಿ ಸದನ ನಡೆಯುವ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಕಳಕಳಿಯಿಂದ ಪ್ರಶ್ನೆ ಕೇಳುವು ದಕ್ಕೆ ಅವಕಾಶವಿಲ್ಲದೇ ಹೋದರೆ ಹೇಗೆ ? ನಮ್ಮ ಕಳಕಳಿಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಸಕ್ಕರೆ ವಿತರಣೆಯಾಗಿಲ್ಲ. ಬಡವರು 8 ರೂಪಾಯಿಗೆ ಕೆ.ಜಿ, ಸಕ್ಕರೆ ತೆಗೆದುಕೊಂಡು ಕಾಫಿ, ಟೀ ಮಾಡಿಕೊಂಡು ಕುಡಿಯುವ ಸ್ಥಿತಿಯಲ್ಲಿಲ್ಲ ; ಅಲ್ಲಿ ಅವ್ಯವಸ್ಥೆಯಾಗದ ರೀತಿಯಲ್ಲಿ ನೋಡಬೇಕು. ಅಲ್ಲಿಗೆ ಜೂನ್, ಜುಲೈ ತಿಂಗಳಲ್ಲಿ ಸಕ್ಕರೆ ಬಂದಿಲ್ಲ. ಅವ್ಯವಸ್ಥೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಮಾನ್ಯ ಮಂತ್ರಿ ಗಳು ನಮ್ಮ ಜಿಲ್ಲೆಯವರೇ ಇದ್ದಾರೆ ಈ ವಿಷಯವನ್ನು ತಮ್ಮ ಮೂಲಕ ತರುವುದಕ್ಕೆ ಪ್ರಯತ್ನ ಮಾಡಿದೆ. ನಾನು ಕೇಳುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರೆ, ನಾನು ಏನು ಮಾಡಲಿ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಯಡಿಯೂರಪ್ಪನವರು ಕೇಳಿದ ಪ್ರಶ್ನೆಯಲ್ಲಿ ಸತ್ಯಾಂಶವಿದೆ. ತುಂಗಭದ್ರ ಶುಗರ್ ಫ್ಯಾಕ್ಟರಿಗೆ ಅಲಾಟ್ ಮಾಡಿದೆವು. ಅಲ್ಲಿ ಮುಷ್ಕರದಿಂದ ಲಿಫ್ಟ್ ಮಾಡಲಿಲ್ಲ. ಈಗ ಬೇರೆ ವ್ಯವಸ್ಥೆ ಮಾಡಿದ್ದೇವೆ. ನಿನ್ನೆ 50 ಟನ್ ಕಳಿಸಿದ್ದೇವೆ. ಅವ್ಯವಸ್ಥೆಯಾಗದ ಹಾಗೆ ನಾವು ವ್ಯವಸ್ಥೆ ಮಾಡಿದ್ದೇವೆ.

(2) ತಗಡೂರು ರಾಮಚಂದ್ರರಾಯರ ಸಾಕ್ಷ್ಯ ಚಿತ್ರ ತೆಗೆಯುವ ಬಗ್ಗೆ

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ಜಮನಲಾಲ್ ಬಜಾಜ್ ಪ್ರಶಸ್ತಿ ವಿಜೇತರೂ, ರಾಜ್ಯ ಪ್ರಶಸ್ತಿ ವಿಜೇತರೂ ಹಾಗೂ ಕರ್ನಾಟಕದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರೂ

ಆದ ಕರ್ಮಯೋಗಿ ಶ್ರೀ ತಗಡೂರು ರಾಮಚಂದ್ರರಾವ್‌ರವರ ಮನೆಗೆ ಮಾನ್ಯ ಮುಖ್ಯ ಮಂತ್ರಿಗಳು ಸಂದರ್ಶನಕ್ಕಾಗಿ ಭೇಟಿ ನೀಡಿದಾಗ ಕರ್ನಾಟಕ ಸರ್ಕಾರವು ಶ್ರೀ ರಾಮಚಂದ್ರರಾಯರ ಬಗ್ಗೆ ಒಂದು ಸಾಕ್ಷ್ಯ ಚಿತ್ರ ತೆಗೆಯುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಅಥವಾ ಸಾಕ್ಷ್ಯ ಚಿತ್ರ ತೆಗೆಯಲಾಗಿದೆಯೇ ? ಇಲ್ಲದಿದ್ದರೆ, ಕೂಡಲೇ ಸರ್ಕಾರ ಕ್ರಮ ಕೈಗೊಂಡು ಇಳಿ ಪಯಸ್ಸಿನಲ್ಲಿರುವ ಇವರ ಸಾಕ್ಷ್ಯ ಚಿತ್ರವನ್ನು ಅದಷ್ಟು ಶೀಘ್ರವಾಗಿ ತೆಗೆಯಲು ಕ್ರಮ ಕೈಗೊಳ್ಳುವುದು. ಇಡೀ ಕರ್ನಾಟಕದಲ್ಲಿ ಖ್ಯಾತರಾದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಬಿ. ಸಿದ್ದಲಿಂಗಯ್ಯನವರ ಬಗ್ಗೆ ಕೂಡ ಸಾಕ್ಷ್ಯ ಚಿತ್ರವನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ವೇದಾಂತ ಹೆಬ್ಬಿಗೆಯವರು ಶ್ರೀ ತಗಡೂರು ರಾಮಚಂದ್ರರಾಯರ ಬಗ್ಗೆ ಸಾಕ್ಷ್ಯ ಚಿತ್ರ ತೆಗೆಯಬೇಕು ಎಂದು ಹೇಳಿದ್ದಾರೆ, ಇದು ಸರ್ಕಾರದ ಗಮನದಲ್ಲಿದೆ. ಈಗ ತೆಗೆಯುವುದಕ್ಕೆ ಏರ್ಪಾಟು ಮಾಡುತ್ತಾ ಇದ್ದೇವೆ.

(3) ಅಲೆಂಬಿಕ್ ಗ್ಲಾಸ್ ಕಾರ್ಖಾನೆಯಲ್ಲಿ 'ಲೇ-ಆಫ್' ಘೋಷಿಸಿರುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ದಕ್ಷಿಣದಲ್ಲಿರುವ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿಯನ್ನು ಮಾಲೀಕರು ನವೆಂಬರ್ 15, 1984ರಂದು ಲೇ ಆಫ್ ಮಾಡಿದರು. 23-2-85ರಂದು ಅದನ್ನು ಮುಚ್ಚಲು ಸರ್ಕಾರದಿಂದ ಅನುಮತಿ ಪಡೆಯಲು ಪ್ರಯತ್ನ ಪಟ್ಟರು. ಆದರೆ ಸರ್ಕಾರ ಅನುಮತಿ ನೀಡಲಿಲ್ಲ ಎನ್ನುವ ದೃಷ್ಟಿಯಿಂದ ಈ ವಿಷಯದ ಬಗ್ಗೆ ಮಾಲೀಕರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರು, ಹೈಕೋರ್ಟಿನವರು ಮಾಲೀಕರು ಸಲ್ಲಿಸಿದ ಅರ್ಜಿಯನ್ನು ಸರ್ಕಾರಕ್ಕೆ ಪರಿಶೀಲನೆ ಮಾಡಲು ಕಳುಹಿಸಿದರು ; ಮಾಲೀಕರ ಪರವಾಗಿ ತೀರ್ಮಾನ ಕೊಡಲಿಲ್ಲ. ಸರ್ಕಾರ ಪುನಃ ಅವರಿಗೆ ಫ್ಯಾಕ್ಟರಿಯನ್ನು ಮುಚ್ಚಲು ಅನುಮತಿ ನೀಡಲಿಲ್ಲ, ಇದಾದನಂತರ ಮಾಲೀಕರು ಸಿವಿಲ್ ಕೋರ್ಟಿನಿಂದ ಇಂಜಂಕ್ಷನ್ ಪಡೆಯಲು (ಯಂತ್ರಗಳನ್ನು ಸಾಗಿಸಲು ನಿರ್ಬಂಧವಿಲ್ಲದಂತೆ) ಯತ್ನಿಸಿದರು, ಇದೂ ಸಿಗಲಿಲ್ಲ. ಇಷ್ಟೆಲ್ಲಾ ಇದ್ದರೂ ಈಗ ಯಂತ್ರಗಳನ್ನು ತೆಗೆದುಕೊಂಡು ಹೋಗಲು ಈ ಮಾಲೀಕವರ್ಗ ಯತ್ನಿಸುತ್ತಿದೆ ; ಅದನ್ನು ಕಾರ್ಮಿಕರು ತಡೆದಿದ್ದಾರೆ. ನನ್ನ ಹತ್ತಿರ ಎರಡು ಫೋಟೋಗಳಿವೆ ಅದನ್ನು ತಮಗೆ ಕಳಿಸಿಕೊಡುತ್ತೇನೆ. ಸರ್ಕಾರ ಮಧ್ಯೆ ಪ್ರವೇಶಿಸಿ ಕಾರ್ಮಿಕರಿಗೆ ನೆರವು ನೀಡದಿದ್ದಲ್ಲಿ ಕಾನೂನು ಉಲ್ಲಂಘನೆ ಮಾಡುತ್ತಿರುವ ಮಾಲೀಕರಿಗೆ ಸಹಾಯ ಮಾಡಿದಂತಾಗುತ್ತದೆ. 800 ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಪೋಲೀಸರು ಮಧ್ಯೆ ಪ್ರವೇಶಿಸಿ ಸರ್ಕಾರ ಪರ್ಮಿಷನ್ ಕೊಡದೇ ಹೋದರೂ ಏಕೆ ಮಾಲೀಕರಿಗೆ ಸಪೋರ್ಟ್ ಮಾಡಬೇಕು ? ಏಕೆ ಎಂದು ಕೇಳಿದರೆ ನಮಗೆ ಗೊತ್ತಿಲ್ಲ, ನೀವು ಗಲಾಟೆ ಮಾಡಿದಿರಿ, ನಾವು ಬಂದೆವು ಎಂದು ಪೋಲೀಸರು ಕಾರ್ಮಿಕರನ್ನು ಹೆದರಿಸುತ್ತಾ ಇದ್ದಾರೆ. ಸರ್ಕಾರ ಮತ್ತು ಪೋಲೀಸರು ಸರಿಯಾದ ಕ್ರಮ ತೆಗೆದುಕೊಳ್ಳದೇ ಹೋದರೆ ಯಂತ್ರಗಳು ಹೋಗುತ್ತವೆ, ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಆಗ ಸರ್ಕಾರ ಇದ್ದೂ ಪ್ರಯೋಜನವಿಲ್ಲ ; ಕಾರ್ಮಿಕ ಇಲಾಖೆ ಇದ್ದು ಪ್ರಯೋಜನವಿಲ್ಲ ; ನಾವು ನೀವು ಇದ್ದು ಪ್ರಯೋಜನವಿಲ್ಲ. ಈ ವಿಷಯ ಅತಿ ಜರೂರಿನ ವಿಷಯವಾದ್ದರಿಂದ, ಪೋಲೀಸರಿಗೂ ಕಾರ್ಮಿಕರಿಗೂ ವಿನಾಕಾರಣ ಘರ್ಷಣೆಯಾಗುವ ಸಂಭವವಿರುವುದರಿಂದ ಮಾನ್ಯ ಕಾರ್ಮಿಕ ಸಚಿವರು ಇದರ ಬಗ್ಗೆ ಸ್ಪಷ್ಟ ಹೇಳಿಕೆ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

The Management of Alembic Glass Industries, Whitefield, Bangalore have laid off about 800 workers with effect from 15th November 1984 on grounds of power cut. They have offered lay off compensation to the workers as per the Industrial Disputes Act.

The Management of Alembic Glass Industries, Bangalore have also filed an application dated 23rd February 1985 for closure of their factory under Section 25-0(1) of the Industrial Disputes Act, 1947. The main reason for the closure application was short supply of electric power, as a result of which the management claimed that the unit was unable to meet given its minimum power requirements.

After hearing both parties an order was passed on 22nd April 1985 refusing permission for closure on the grounds that shortage of